ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ?

ಇ) ಎಷ್ಟು ಸಮಯದೊಳಗೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ತಾಲ್ಲೂಕಿನಲ್ಲಿ ಖಾಲಿಯಿರುವ ಕೃಷಿ ಸಹಾಯಕರ ಹುದ್ದೆಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು		ಖಾಲಿ ಇರುವ ಹುದ್ದೆಗಳ ಸಂಖ್ಯೆ
೧.	ಪುತ್ತೂರು	...	೩
೨.	ಸೂಳ್ಯ	...	೨
೩.	ಬೆಳ್ತಂಗಡಿ	...	೨
೪.	ಕಾರ್ಕಳ	...	೧
೫.	ಬಂಟ್ವಾಳ	...	೩
೬.	ಮಂಗಳೂರು	...	೨
೭.	ಕುಂದಾಪುರ	...	೨
೮.	ಉಡುಪಿ	...	೧೧
		ಒಟ್ಟು	೨೬

ಆ) ಮತ್ತು ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಕೃಷಿ ಸಹಾಯಕರ ಹುದ್ದೆಗಳನ್ನು ಸಾರ್ವಜನಿಕ ವರ್ಗಾವಣೆ ಸಮಯದಲ್ಲಿ ಸ್ಥಾಧ್ಯವಾದಷ್ಟು ಮಟ್ಟಿಗೆ ತುಂಬಲು ಪ್ರಯತ್ನಿಸಲಾಗುವುದು.

ಹೆಬ್ರಿ ವಲಯದ ವ್ಯಾಪ್ತಿಯ ಅರಣ್ಯದ ಬಗ್ಗೆ

೩೩೨ (೬೯೬) ಶ್ರೀ ರಾಜುಗೌಡ (ಹನೂರು). —ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ;

ಅ) ಹೆಬ್ರಿ ವಲಯದ ವ್ಯಾಪ್ತಿಯ ಅಲ್ಬಾಡಿ ಗ್ರಾಮದ ಸರ್ವೆ ನಂಬ್ರ ೧೯೫/೧ರಲ್ಲಿ ಕಡಿದ ೨೯ ಕುತ್ತಿಗಳು ಗ್ರಾಮ ಲೆಕ್ಕಿಗರು ಮತ್ತು ಸಂಬಂಧಪಟ್ಟ ಫಾರೆಸ್ಟರ್ ಅಕ್ರಮ ಅಳತೆ ಮುಖಾಂತರ ಸರಕಾರಿ ಸ್ಥಳವನ್ನು ಪಟ್ಟಾ ಸ್ಥಳವೆಂದು ಗುರುತಿಸಿರುವುದು ನಿಜವೇ ?

ಆ) ಅಲ್ಬಾಡಿ ಗ್ರಾಮದ ಸರ್ವೆ ನಂಬ್ರ ೧೯೫/೧ ಆ ಸರಕಾರಿ ಸ್ಥಳದಲ್ಲಿ ಸಹಾಯಕ ಭೂಮಾಪನ ಅಧಿಕಾರಿಗಳಿಂದ ಅಳತೆ ಮಾಡಿದಾಗ ಸರಕಾರಿ ಸ್ಥಳವೆಂದು ಸಾಬೀತು ಆಗಿರುವುದು ನಿಜವೇ ?

ಇ) ಈ ಬಗ್ಗೆ ಇಲಾಖೆಯ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಅಲ್ಬಾಡಿ ಗ್ರಾಮದ ಸರ್ವೆ ನಂಬ್ರ ೧೯೫/೧ರ ಲಗ್ತಿ ಸ್ಥಳದಲ್ಲಿ ಕಡಿದ ೨೯ ಕುತ್ತಿಗಳ ಬಗ್ಗೆ ಹೆಬ್ರಿ ವಲಯದಲ್ಲಿ ಅರಣ್ಯ ತಕ್ಷೀರು ಸಂಖ್ಯೆ ೯೮/೮೮-೮೯ರಂತೆ ತಕ್ಷೀರು ದಾಖಲು ಮಾಡಿಕೊಳ್ಳಲಾಗಿದೆ.

ಆ) ಸಮೀಕ್ಷೆ ಮಾಡುವಾಗ ಇದು ಸರ್ಕಾರೀ ಜಮೀನೆಂದು ತಿಳಿದು ಬಂದಿದೆ.

ಇ) ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಉದ್ಭವಿಸುವುದಿಲ್ಲ.